**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ. ಕೋಟ ಶ್ರೀನಿವಾಸ ಪೂಜಾರಿ ರವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:**

**ಪ್ರಶ್ನೆ:**

**ರಾಜ್ಯದಲ್ಲಿ ನರ್ಸಿಂಗ್ ಕಾಲೇಜುಗಳಲ್ಲಿ ಜಿ.ಎನ್.ಎಂ ಕೋರ್ಸುಗಳಿಗೆ ಅತೀಯಾದ ಬೇಡಿಕೆಗಳಿದ್ದರೆ ಹೊಸದಾಗಿ ಜಿ.ಎನ್.ಎಂ ಕೋರ್ಸುಗಳನ್ನು ಪ್ರಾರಂಭಿಸಲು ಅನುಮತಿ ನೀಡದಿರುವ ಕುರಿತು ಪ್ರಸ್ತಾಪಿಸಲಾಗಿದೆ.**

**ಉತ್ತರ:**

ರಾಜ್ಯದಲ್ಲಿ ಯಾವುದೇ ನರ್ಸಿಂಗ್ ಶಾಲೆಗಳಿಗೆ (GNM) ಹೊಸದಾಗಿ ಪ್ರಾರಂಭಿಸುವ/ಪ್ರವೇಶ ಮಿತಿ ಹೆಚ್ಚಿಸುವ ಮತ್ತು ವಿಳಾಸ ಬದಲಾವಣೆಗಳ ಪ್ರಕರಣಗಳಿಗೆ ಅನುಮತಿ ನೀಡುವ ಪ್ರಕ್ರಿಯೆಯನ್ನು ಸರ್ಕಾರದ ಮುಂದಿನ ಆದೇಶದವರೆಗೆ ತಡೆಹಿಡಿದು ಸರ್ಕಾರದ ಆದೇಶ ಸಂ: ಎಂಇಡಿ 211 ಎಂಎಸ್ಎಫ್ 2022, ದಿ: 20/5/2022ರಲ್ಲಿ ಆದೇಶಿಸಲಾಗಿತ್ತು.

ಸರ್ಕಾರದ ಆದೇಶ ಸಂ: ಎಂಇಡಿ 211 ಎಂಎಸ್ಎಫ್ 2022,ದಿ: 20/5/2022ರಲ್ಲಿ ರಾಜ್ಯದಲ್ಲಿ ಯಾವುದೇ ನರ್ಸಿಂಗ್ ಶಾಲೆಗಳಿಗೆ (GNM) ಹೊಸದಾಗಿ ಪ್ರಾರಂಭಿಸುವ/ಪ್ರವೇಶ ಮಿತಿ ಹೆಚ್ಚಿಸುವ ಮತ್ತು ವಿಳಾಸ ಬದಲಾವಣೆಗಳ ಪ್ರಕರಣಗಳಿಗೆ ಅನುಮತಿ ನೀಡುವ ಪ್ರಕ್ರಿಯೆಯನ್ನು ಸರ್ಕಾರದ ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುವ ಪೈಕಿ, ಹೊಸದಾಗಿ ಪ್ರಾರಂಭಿಸುವ G.N.M ಶಾಲೆಗಳಿಗೆ ಮಾತ್ರ ಅನ್ವಯಿಸುವಂತೆ ಸದರಿ ಆದೇಶವನ್ನು ಹಿಂಪಡೆದು, ಭಾರತೀಯ ಶುಶ್ರೂಷಾ ಪರಿಷತ್ (Indian Nursing Council) ಮಾರ್ಗಸೂಚಿಗಳನ್ವಯ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ನರ್ಸಿಂಗ್ ಶಾಲೆಗಳನ್ನು (GNM) ಹೊಸದಾಗಿ ಪ್ರಾರಂಭಿಸುವ ಪ್ರಸ್ತಾವನೆಗಳಿಗೆ ಮಾತ್ರ ಅನುಮತಿ ನೀಡುವ ಪ್ರಕ್ರಿಯೆಯನ್ನು ಸರ್ಕಾರದ ಮುಂದಿನ ಆದೇಶದವರೆಗೆ ಮುಂದುವರೆಸಿ ಸರ್ಕಾರದ ಆದೇಶ ಸಂ: ಎಂಇಡಿ 211 ಎಂಎಸ್ಎಫ್ 2022,ದಿ: 27/10/2023ರಲ್ಲಿ ಆದೇಶಿಸಿದೆ.

**ಸಂಖ್ಯೆ:ಎಂಇಡಿ 700 ಎಂಎಂಸಿ 2023**

**(ಡಾ|| ಶರಣಪ್ರಕಾಶ್ ಆರ್.ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು